# 15. ವೀರಲವ

– ಲಕ್ಷ್ಮೀಶ

## ಕವಿ – ಕಾವ್ಯ ಪರಿಚಯ



**ಲಕ್ಷ್ಮೀಶ**

ಕವಿ ಲಕ್ಷ್ಮೀಶ **ಕ್ರಿ. ಶ. 1550**ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿ**ನಲ್ಲಿ ಜನಿಸಿದನು. ಈತನಿಗೆ **ಲಕ್ಷ್ಮೀರಮಣ, ಲಕ್ಷ್ಮೀಪತಿ** ಎಂಬ ಹೆಸರುಗಳೂ ಇವೆ. **'ಜೈಮಿನಿಭಾರತ'** ವೆಂಬ ಪ್ರಸಿದ್ಧ ಕೃತಿಯನ್ನು ಬರೆದಿದ್ದಾನೆ.

ಲಕ್ಷ್ಮೀಶ ಕವಿಗೆ **ಉಪಮಾಲೋಲ, ಕರ್ಣಾಟಕವಿ ಚೂತವನಚೈತ್ರ** – ಎಂಬ ಬಿರುದುಗಳಿವೆ.

## ಪದ್ಯದ ಹಿನ್ನಲೆ ಮತ್ತು ಆಶಯ ಭಾವ

**ವಾಲ್ಮೀಕಿ :** ಒಬ್ಬ ಬ್ರಹ್ಮರ್ಷಿ. ಪ್ರಚೇತಸನ ಮಗನಾದುದರಿಂದ ಪ್ರಾಚೇತಸ ಎಂಬ ಹೆಸರೂ ಇದೆ. ಯೌವನಾಸ್ಥೆಯಲ್ಲಿ ಬೇಡರ ಸಂಗಡ ಸೇರಿ ದಾರಿಗಳ್ಳನಾಗಿದ್ದ. ನಾರದ ಮಹರ್ಷಿಗಳ ಬೋಧನೆಯಿಂದ ರಾಮನಾಮ ಜಪಿಸುತ್ತಿದ್ದಾಗ ಈತನ ಮೈಮೇಲೆ ಹುತ್ತ (ವಲ್ಮೀಕ) ಬೆಳೆಯಿತು. ನಾರದ ಮಹರ್ಷಿಗಳಿಂದಾಗಿ ವಲ್ಮೀಕದಿಂದ ಹೊರಗೆ ಬಂದ ಈತನು **ವಾಲ್ಮೀಕಿ** ಎಂದು ಪ್ರಸಿದ್ಧನಾದನು.

ಆದಿಕವಿ ವಾಲ್ಮೀಕಿ ಸಂಸ್ಕೃತ ಭಾಷೆಯಲ್ಲಿ ರಾಮಾಯಣ ಮಹಾಕಾವ್ಯ ರಚಿಸಿದರು. ವ್ಯಾಸರು ಮಹಾಭಾರತವನ್ನು ರಚಿಸಿದರು. ಈ ಎರಡು ಕಾವ್ಯಗಳು ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣುವು **"ದುಷ್ಟರ ಸಂಹಾರಕ್ಕಾಗಿ, ಶಿಷ್ಟರ ರಕ್ಷಣೆಗಾಗಿ"** ಮಾನವ ರೂಪವನ್ನು ಧರಿಸಿ ಮಾಡಿದ ಕಾರ್ಯಗಳನ್ನು ತಿಳಿಸಿಕೊಡುತ್ತವೆ. ಕನ್ನಡದಲ್ಲಿ ಕುಮಾರವ್ಯಾಸನು ಮಹಾಭಾರತವನ್ನು ರಚಿಸಿ ಕೃಷ್ಣಕತೆಯಾಗಿಸಿದ್ದಾನೆ. ಇವೆರಡು ಕಾವ್ಯಗಳಲ್ಲಿ ಬರುವ ಅನೇಕ ವಿಷ್ಣುಭಕ್ತರ ಶೌರ್ಯ, ಧೈರ್ಯ, ಸಾಹಸ, ಗುಣ ಸ್ವಭಾವಗಳನ್ನು ಸಹೃದಯರಿಗೆ ತಿಳಿಸಿಕೊಡುವ ಆಶಯದಿಂದ ಲಕ್ಷೀಶ ಕವಿಯು **"ಜೈಮಿನಿ ಭಾರತ"**ವನ್ನು ರಚಿಸಿದ್ದಾನೆ. ಇಲ್ಲಿ ಬರುವ ಕುಶಲವರ ಕತೆ ಸರಳವೂ ಸುಂದರವೂ ಆಗಿದೆ. ಶ್ರೀರಾಮನು ಕೈಗೊಂಡ ಅಶ್ವಮೇಧದ ಕುದುರೆಯನ್ನು ಬಾಲಸಹಜ ಕುತೂಹಲದಿಂದ ಲವನು ಕಟ್ಟುತ್ತಾನೆ. ಆ ಸಂದರ್ಭದ ಕಾವ್ಯಸೊಬಗನ್ನು ಪರಿಚಯಿಸುವುದು ಈ ಪದ್ಯದ ಆಶಯ.

**ಲವ :** ಶ್ರೀರಾಮನಿಂದ ಸೀತೆಯಲ್ಲಿ ಜನಿಸಿದ ಅವಳಿ ಮಕ್ಕಳಲ್ಲಿ ಚಿಕ್ಕವ. ಶ್ರೀರಾಮನಿಂದ ಪರಿತ್ಯಕ್ತಳಾದ ತುಂಬು ಗರ್ಭಿಣಿ ಸೀತೆ ವಾಲ್ಮೀಕಿ ಆಶ್ರಮದಲ್ಲಿ ಆಶ್ರಯ ಪಡೆದ ಸಂದರ್ಭದಲ್ಲಿ ಜನಿಸಿದವ. ವಾಲ್ಮೀಕಿಯಿಂದ ರಚಿತವಾದ ರಾಮಾಯಣವನ್ನು ಅಣ್ಣ ಕುಶನ ಜೊತೆ ಸೇರಿ ಹಾಡುತ್ತಿದ್ದನು.

ನಮ್ಮ ಮಹಾಕಾವ್ಯಗಳಲ್ಲಿ ತಂದೆ–ಮಕ್ಕಳು ಬೇರೆಬೇರೆಯಾಗಿ ಬೆಳೆದು. ಯಾವುದೋ ಸಂದರ್ಭದಲ್ಲಿ ಮುಖಾಮುಖಿಯಾಗುವ ಸನ್ನಿವೇಶಗಳು ಇವೆ. ಪರಸ್ಪರರ ಸಂಬಂಧದ ಅರಿವಿರದೆ ಸಂಘರ್ಷಕ್ಕೆ ಮುಂದಾಗುವ ಪ್ರಸಂಗಗಳಿವೆ. ಅನಂತರ ಯಾರಿಂದಲಾದರೂ ಸಂಬಂಧ ತಿಳಿದಾಗ ಸಂಘರ್ಷ ಮರೆಯಾಗಿ ಹೊಂದಾಣಿಕೆ ರೂಪದ ಸುಖಾಂತ್ಯವಾಗುವ ಸಂದರ್ಭಗಳೇ ಹೆಚ್ಚು. **ಭೀಮ–ಘಟೋತ್ಕಚ, ಅರ್ಜುನ–ಬಬ್ರುವಾಹನ. ಕುಶಲವ– ಶ್ರೀರಾಮ** ಇವರ ಭೇಟಿ ಇಂತಹ ಪ್ರಸಂಗಗಳಿಗೆ ದೃಷ್ಟಾಂತಗಳು.

**"ಹುಟ್ಟುಗುಣ ಗಟ್ಟಹತ್ತಿದರೂ ಹೋಗದು"** ಎಂಬುದು ನಾಣ್ಣುಡಿ. ಪ್ರತಿಯೊಂದು ಜೀವಿಯೂ ಹುಟ್ಟಿನಿಂದಲೇ ಕೆಲವೊಂದು ಗುಣಗಳನ್ನು ಪಡೆದಿರುತ್ತದೆ. ಇದಕ್ಕೆ ಅದರ ವಂಶವಾಹಿನಿ ಕಾರಣವಾಗಿರುತ್ತದೆ. ಕ್ಷತ್ರಿಯ ಕುಮಾರನಾದ ಲವ ಹುಟ್ಟಿದ್ದು ಋಷ್ಯಾಶ್ರಮದಲ್ಲಿ, ಬೆಳೆದದ್ದು ಋಷಿಕುಮಾರರ ಜೊತೆಗೆ. ಆದರೂ ಅವನ ದೇಹದಲ್ಲಿ ಹರಿಯುತ್ತಿರುವುದು ಕ್ಷತ್ರಿಯ ಗುಣವುಳ್ಳರಕ್ತ. ಹೀಗಾಗಿ ಆಶ್ರಮಕ್ಕೆ ಬಂದ ಕುದುರೆಯ ಹಣೆಯಲ್ಲಿದ್ದ ಲೇಖನದ ಒಕ್ಕಣೆ ಓದಿಕ್ಷತ್ರಿಯ ಸಹಜಗುಣ ಅವನಲ್ಲಿ ಉದ್ದೀಪನಗೊಂಡ ಸನ್ನಿವೇಶವನ್ನು ಇಲ್ಲಿ ಕಾಣಬಹುದು.

**ಲಕ್ಷ್ಮೀಶ** ವಿರಚಿತ **ಜೈಮಿನಿಭಾರತ** ಕಾವ್ಯವನ್ನು **ದೇವುಡುನರಸಿಂಹ ಶಾಸ್ತ್ರೀ** ಮತ್ತು **ಬಿ.ಶಿವಮೂರ್ತಿ ಶಾಸ್ತ್ರೀ** ಇವರು ಸಂಪಾದಿಸಿದ್ದು ಅದರ ಇಪ್ಪತ್ತನೆಯ ಸಂಧಿಯಿಂದ ಈ ಭಾಗವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಪೂರ್ವಕಥೆ :** ರಾಮಾಯಣ, ಮಹಾಭಾರತ, ಭಾಗವತಗಳಲ್ಲಿ ಅನೇಕ ಸಾಹಸಿಗಳಾದ ಬಾಲಕರ ಕಥೆಗಳು ಇವೆ. ಅಂತಹವುಗಳಲ್ಲಿ. ಲವನ ಕತೆಯೂ ಒಂದು. ರಾವಣನನ್ನು ಸಂಹರಿಸಿ, ಅಯೋಧ್ಯೆಗೆ ಸೀತಾಸಮೇತನಾಗಿ ಬಂದ ರಾಮ ಪ್ರಜಾನುರಾಗಿಯಾಗಿ ರಾಜ್ಯಭಾರ ಮಾಡುತ್ತಿದ್ದನು. ಗರ್ಭಿಣಿಯಾದ ಸೀತೆ ಒಂದು ದಿನ ವಾಲ್ಮೀಕಿ ಮಹರ್ಷಿಗಳ ಆಶ್ರಮವನ್ನು ನೋಡಬೇಕೆಂಬ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಕಾಕತಾಳೀಯವಾಗಿ ಅದೇ ರಾತ್ರಿ ಪ್ರಜೆಯೊಬ್ಬ ಸೀತೆಯ ಬಗ್ಗೆ ಅವಮಾನದ ನುಡಿಗಳನ್ನು ಆಡುತ್ತಾನೆ. ಇದನ್ನು ತಿಳಿದ ರಾಮನು ತಮ್ಮನಾದ ಲಕ್ಷ್ಮಣನನ್ನು ಕರೆದು ತುಂಬುಗರ್ಭಿಣಿಯಾದ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರುವಂತೆ ಆಜ್ಞಾಪಿಸುತ್ತಾನೆ. ಪ್ರಜೆಗಳ ಅಭಿಪ್ರಾಯವೇ ಸರ್ವಸ್ವವೆಂದು ತಿಳಿದ ರಾಮನ ಈ ಆಜ್ಞೆಯಂತೆ ಲಕ್ಷ್ಮಣ ವಾಲ್ಮೀಕಿ ಆಶ್ರಮಕ್ಕೆ ಹೋಗುವ ನೆಪದೊಂದಿಗೆ ಸೀತೆಯನ್ನು ಕಾಡಿಗೆ ಕೊಂಡೊಯ್ಯುತ್ತಾನೆ. ಕಾಡಿನಲ್ಲಿ ಏಕಾಂಗಿಯಾಗಿದ್ದ ಸೀತೆ ದುಃಖಿಸುತ್ತಿರುವ ಸಂದರ್ಭದಲ್ಲಿ ಆ ಪ್ರದೇಶಕ್ಕೆ ಬಂದ ವಾಲ್ಮೀಕಿ ಮಹರ್ಷಿಗಳು ಸೀತೆಯನ್ನು ತಮ್ಮಾಶ್ರಮಕ್ಕೆ ಕರೆದೊಯ್ಯುತ್ತಾರೆ. ಆಶ್ರಮದಲ್ಲಿ ಕೆಲವೇ ದಿನಕ್ಕೆ ಸೀತೆ ಅವಳಿ ಮಕ್ಕಳನ್ನು ಹಡೆಯುತ್ತಾಳೆ. ವಾಲ್ಮೀಕಿ ಮಹರ್ಷಿಗಳು ಈ ಮಕ್ಕಳಿಗೆ ಕುಶ, ಲವರೆಂದು ನಾಮಕರಣ ಮಾಡಿ ಸಕಲ ವಿದ್ಯಾಪಾರಂಗತರನ್ನಾಗಿ ಮಾಡುತ್ತಾರೆ. ಇತ್ತ ಸೀತೆಯ ಅಗಲುವಿಕೆಯಿಂದ ರಾಮ ಮಾನಸಿಕವಾಗಿ ದುಃಖಕ್ಕೀಡಾಗುತ್ತಾನೆ. ರಾವಣನ ವಧೆಯಿಂದ ಬ್ರಹ್ಮಹತ್ಯಾದೋಷ ಬಂದಿರುವುದನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಮಹರ್ಷಿಗಳ ಆದೇಶದಂತೆ ರಾಮ ಅಶ್ವಮೇಧವನ್ನು ಕೈಗೊಂಡು ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ದೇಶದೇಶಗಳನ್ನು ಸುತ್ತಾಡಿದ ಅಶ್ವಮೇಧದ ಕುದುರೆ ಒಂದು ದಿನ ವಾಲ್ಮೀಕಿ ಆಶ್ರಮಕ್ಕೆ ಬರುತ್ತದೆ. ಶ್ರೀರಾಮನೇ ತನ್ನ ತಂದೆ ಎಂದು ತಿಳಿಯದ ಲವ ಕುದುರೆಯನ್ನು ಕಟ್ಟುವ ಸನ್ನಿವೇಶವಾಗಿದೆ.

## ಪದ್ಯದ ಸಾರಾಂಶ ವಿವರಣೆ

**ಬಲ್ಲಗ್ಯ್ಯ ನೃಪರಂಜಿ ತಡೆಯದೆ ರಘೂದ್ವಹನ ।**
**ಸೊಲ್ಲೇಳಿ ನಮಿಸಲಿಳೆಯೊಳ್ ಚರಿಸುತದ್ವರದ ।**
**ನಲ್ಲುಗ್ದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು ॥**

**ಪುಲ್ಗಳ ಪಸುರ್ಗೆಳಸಿ ಪೊಕ್ಕೊಡಾ ತೋಟಗಾ ।**
**ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆ ಮಿಗೆ ।**
**ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು ॥ 1 ॥**

**ಬಿಡಿಸಿ ಓದು :**

ಬಲ್ಗಯ್ಯ ನೃಪರ್+ಅಂಜಿ ತಡೆಯದೆ ರಘು+ಉದ್ವಹನ ಸೊಲ್+ಕೇಳಿ ನಮಿಸಲ್+ಇಳೆಯೊಳ್ ಚರಿಸುತ+ ಅಧ್ವರದ ನಲ್+ಕುದುರೆ ಬಂದು ವಾಲ್ಮೀಕಿಯ ನಿಜ+ಆಶ್ರಮದ ವಿನಿಯೋಗದ+ ಉಪವನದೊಳು ಪುಲ್ಗಳ ಪಸುರ್ಗೆ+ಎಳಸಿ ಪೊಕ್ಕೊಡೆ+ಆ ತೋಟ+ಕಾವಲ್ಗೆ ತನ್ನ+ಒಡನಾಡಿಗಳ ಕೂಡಿ ಲೀಲೆಮಿಗೆ ಬಿಲ್+ಕೊಂಡು ನಡೆತಂದ+ಅವಂ ಕಂಡನು+ಅರ್ಚಿತ ಸುವಾಜಿಯಂ ವೀರಲವನು.

**ಪದಗಳ ಅರ್ಥ:** ನೃಪ–ದೊರೆ, ಅಂಜಿ–ಹೆದರಿ, ಚರಿಸು–ಸಂಚರಿಸು, ಉಪವನ–ಉದ್ಯಾನವನ, ಪಸುರು–ಹಸುರು. **ರಘು:** ಸೂರ್ಯ ವಂಶದ ಅರಸ. ತನ್ನ ಪರಾಕ್ರಮದಿಂದ ಭೂಮಂಡಳವನ್ನು ಗೆದ್ದು **'ವಿಶ್ವಜಿತ್'** ಎಂಬ ಯಾಗ ಮಾಡಿ ಸರ್ವಸ್ವವನ್ನು ದಾನಮಾಡಿ ಪ್ರಸಿದ್ಧನಾದ. ಸೂರ್ಯವಂಶದ ಶ್ರೇಷ್ಠ ಅರಸನಾದ ಕಾರಣ ಈತನ ಕಾಲಾನಂತರ ಸೂರ್ಯವಂಶಕ್ಕೆ **ರಘುವಂಶ** ಎಂಬ ಹೆಸರು ಬಂತು.

**ಸಾರಾಂಶ:** ಭುಜಭಲವುಳ್ಳ ದೊರೆಗಳೆಲ್ಲರೂ **ಶ್ರೀರಾಮನ ಆಜ್ಞೆಯನ್ನು ಕೇಳಿ, ಹೆದರಿ ಕುದುರೆಗೆ ನಮಸ್ಕರಿಸಿ ಬಿಟ್ಟು ಕಳುಹಿಸಲು, ಶ್ರೀರಾಮನ ಅಶ್ವಮೇಧ ಯಜ್ಞದ ಉತ್ತಮವಾದ ಕುದುರೆಯು ಭೂಮಿಯ ಮೇಲೆ ಸಂಚರಿಸುತ್ತ ವಾಲ್ಮೀಕಿಯ ವಾಸವಿದ್ದ (ಉಪಯೋಗಿಸುತ್ತಿದ್ದ) ಉದ್ಯಾನವನದ ಹಸುರನ್ನು ಬಯಸಿ ಹೊಕ್ಕಿತು.** ಆಗ ಆ ತೋಟದ ರಕ್ಷಣೆಗೆ ಇದ್ದು. ತನ್ನ ಜೊತೆಗಾರರನ್ನು ಕೂಡಿ ಅತಿಶಯವಾಗಿ ಆಟವಾಡಿ ಬಿಲ್ಲನ್ನು ಎತ್ತಿಕೊಂಡು ಬರುವಾಗ ವೀರಲವನು ಪೂಜಿಸಲ್ಪಟ್ಟ ಉತ್ತಮವಾದ ಕುದುರೆಯನ್ನು ಕಂಡನು.

**ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ।**
**ತೊತ್ತಳದುಳಿದುದು ವಾಲ್ಮೀಕಿಮುನಿನಾಥನೇ ।**
**ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ॥**
**ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ**
**ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ ।**
**ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು ॥ 2 ॥**

**ಬಿಡಿಸಿ ಓದು:**

ಎತ್ತಣ ತುರಂಗಮ್+ಇದು ಪೊಕ್ಕು ಪೂದೋಟಮಂ ತೊತ್ತಳ+ತುಳಿದುದು ವಾಲ್ಮೀಕಿ ಮುನಿನಾಥನ್ +ಏಪೊತ್ತುಮ್+ಆರೈವುದು+ಎಂದು+ಎನಗೆ ನೇಮಿಸಿ ಪೋದನ್+ಅಬ್ಧಿಪಂ ಕರೆಸಲಾಗಿ, ಮತ್ತೆ ವರುಣನ ಲೋಕದಿಂ ಬಂದು ಮುಳಿದಪನ್+ಎನುತ್ತ ಹಯದ+ಎಡೆಗೆ ನಡೆತಂದು ನೋಡಲ್ಕೆ+ಅದರ ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನ್+ ಓದಿಕೊಳುತ+ಇರ್ದನು.

**ಪದಗಳ ಅರ್ಥ:** ತುರಂಗ–ಕುದುರೆ, ಮುಳಿ–ಕೋಪ, ಹಯ–ಕುದುರೆ, ನೆತ್ತಿ–ಹಣೆ, ಲಿಖಿತ–ಬರಹ.

**ವರುಣ:** ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ಈತ ಪಶ್ಚಿಮದಿಕ್ಕಿಗೆ ಒಡೆಯ. ಜಲಾಧಿಪತಿ ಎಂದು ಪ್ರಸಿದ್ಧನಾದವ.

**ಅಬ್ಧಿಪ :** ಅಬ್ಧಿ – ಸಮುದ್ರ, ಪ – ಒಡೆಯ, ಅಬ್ಧಿಪ – ಸಮುದ್ರದ ಒಡೆಯ – ವರುಣ

**ಸಾರಾಂಶ:** ಯಾವ ಕಡೆಯ ಕುದುರೆ ಇದು, ಹೂತೋಟವನ್ನು ಹೊಕ್ಕು ನುಗ್ಗು ನುರಿಯಾಗುವಂತೆ ತುಳಿಯುತ್ತಿದಿಯಲ್ಲ. ವಾಲ್ಮೀಕಿ ಋಷಿಗಳು ತೋಟವನ್ನು ಒಣಗದಂತೆ ಹಾರೈಕೆಮಾಡುವುದು ಎಂದು ನನಗೆ ನೇಮಿಸಿ ವರುಣದೇವನು ಕರೆಯಲಾಗಿ ಹೋದನು. ಮತ್ತೆ ವರುಣನ ಲೋಕದಿಂದ ಬಂದು ಇದನ್ನು ನೋಡಿ ಕೋಪಗೊಳ್ಳುತ್ತಾರೆಂದು, ಕುದುರೆಯ ಕಡೆಗೆ ಬಂದು ನೋಡಲು ಅದರ ಹಣೆಯ ಮೇಲೆ ಮೆರೆವ ಪಟ್ಟದ ಬರೆಹವನ್ನು ಓದಿಕೊಳ್ಳುತ್ತಿದ್ದನು.



**ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।**
**ನೊರ್ವನೇ ವೀರನಾತನ ಯಜ್ಞತುರಗಮಿದು ।**
**ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥**
**ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।**
**ಸರ್ವಜನಮುಂ ಬಂಜೆಯೆನ್ನದಿರ್ಪುದೆ ತನ ।**
**ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥ 3 ॥**

**ಬಿಡಿಸಿ ಓದು :**

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮನ್+ಒರ್ವನೇ ವೀರನ್+ಆತನ ಯಜ್ಞತುರಗಮ್+ಇದ ನಿರ್ವಹಿಸಲ್+ಆರ್ಪರ್+ಆರ್+ಆದೊಡಂ ತಡೆಯಲಿ+ಎಂದು+ಇರ್ದ ಲೇಖನವನ್+ಓದಿ ಗರ್ವಮಂ ಬಿಡಿಸದೆ+ಇರ್ದೊಡೆ ತನ್ನ ಮಾತೆಯಂ ಸರ್ವ ಜನಮುಂ ಬಂಜೆ+ಎನ್ನದೆ+ಇರ್ಪುದೆ ತನಗೆ+ಉರ್ವ+ತೋಳ್ಗಳ್+ಇವು+ಏತಕೆ+ಎಂದು ಸಲೆ ವಾಸಿಯಂ ತೊಟ್ಟು ಲವನ್+ಉರಿದು+ಎದ್ದನು.

**ಪದಗಳ ಅರ್ಥ:** ಉರ್ವಿ–ಭೂಮಿ, ಆರ್ಪರ್–ಸಮರ್ಥರು, ಬಂಜೆ(ದ್ಭ)–ವಂಧ್ಯಾ (ತ್ಸ) – ಸಂತಾನವಿಲ್ಲದವಳು; ವಾಸಿ–ಪ್ರತಿಜ್ಞೆ.

**ಸಾರಾಂಶ: " ಭೂಮಂಡಲದಲ್ಲಿ ಕೌಸಲ್ಯ ಪಡೆದ ಕುಮಾರ ಶ್ರೀರಾಮನೊಬ್ಬನೇ ವೀರನು, ಆತನ ಯಜ್ಞನದ ಕುದುರೆ ಇದು. ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಲಿ "** ಎಂದು ಇದ್ದ ಲೇಖನವನ್ನು ಓದಿ, ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ

ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದೆ ಇರುವರೇ, ತನಗೆ ಇರುವ ಈ ತೋಳುಗಳು ಏತಕ್ಕೆ ಬೇಕು ಎಂದು ಪ್ರತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದನು(ಆಕ್ರೋಶಗೊಂಡನು).



**ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।**
**ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।**
**ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥**
**ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।**
**ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।**
**ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ॥ 4 ॥**

**ಬಿಡಿಸಿ ಓದು:**

ತೆಗೆದು+ಉತ್ತರೀಯಮಂ ಮುರಿದು ಕುದುರೆಯ ಗಳಕೆ ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ಮಿಗೆ ನಡುಗಿ ಬೇಡ ಬೇಡ ಅರಸುಗಳ ವಾಜಿಯಂ ಬಿಡು ಬಡಿವರ್+ಎಮ್ಮನ್+ಎನಲು ನಗುತೆ ಪಾರ್ವರ ಮಕ್ಕಳ್+ಅಂಜಿದೊಡೆ ಜಾನಕಿಯ ಮಗನ್+ಇದಕೆ ಬೆದರುವನೆ ಪೋಗಿ ನೀವ್+ಎಂದು ಲವನ್+ಅಗಡುತನದಿಂದೆ ಬಿಲ್+ತಿರುವನ್+ಏರಿಸಿ ತೀಡಿ ಜೇಗೈದು ನಿಂತು+ಇರ್ದನು.

**ಪದಗಳ ಅರ್ಥ:** ವಾಜಿ–ಕುದುರೆ, ಗಳ–ಕೊರಳು, ಕದಳಿ–ಬಾಳೆ, ಬಡಿ–ಹೊಡೆ, ಚಚ್ಚು, ಅಗಡು–ಶೌರ್ಯ.

**ಸಾರಾಂಶ :** ಲವನು ಉತ್ತರೀಯ(ಮೇಲುಹೊದಿಕೆ)ವನ್ನು ಉರಿಮಾಡಿಕೊಂಡು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿದಾಗ, ಅಲ್ಲಿದ್ದ ಮುನಿಗಳ ಮಕ್ಕಳೆಲ್ಲರು ಅಧಿಕವಾಗಿ ಹೆದರಿ ಬೇಡ ಬೇಡ ರಾಜರ ಕುದುರೆಯನ್ನು ಬಿಡು ನಮ್ಮನ್ನು ಅವರು ಬಡಿಯುತ್ತಾರೆ. ಎನ್ನಲು ನಗುತ್ತ ಬ್ರಾಹ್ಮಣರ ಮಕ್ಕಳು ಹೆದರಿದರೆ ಸೀತೆಯ ಮಗನು ಇದಕ್ಕೆ ಹೆದರುವನೆ, ಹೋಗಿ ನೀವು ಎಂದು ಲವನು ಶೌರ್ಯದಿಂದ ಬಿಲ್ಲಿನ ಹಗ್ಗವನ್ನು ಕಟ್ಟಿ, ಅದನ್ನು ಸವರಿ ಜೇಗೈದು ನಿಂತಿದ್ದನು.

**ಪೂರಕ : ಜೇಗೆಯ್ :** ಬಿಲ್ಲಿಗೆ ಕಟ್ಟುವ ಹಗ್ಗವನ್ನು **ಹೆದೆ** ಎಂದು ಕರೆಯುತ್ತಾರೆ. ಈ ಹೆದೆಯನ್ನು ಬೇಕಾದಾಗ ಮಾತ್ರ ಬಿಗಿಯಲಾಗುತ್ತದೆ. ಉಳಿದ ಸಂದರ್ಭದಲ್ಲಿ ಬಿಲ್ಲಿನ ಒಂದು ತುದಿಯಲ್ಲಿ ಮಾತ್ರ ಕಟ್ಟಿರುತ್ತಾರೆ. ಯುದ್ಧಕ್ಕೆ ಸನ್ನದ್ಧನಾದಾಗ ಬಿಲ್ಲುಗಾರ ತನ್ನ ಬಿಲ್ಲಿನ ಹೆದೆಯನ್ನು ಅದರ ಇನ್ನೊಂದು ತುದಿಗೆ ಬಿಗಿಯಾಗಿ ಕಟ್ಟುತ್ತಾನೆ. ಈ ಹೆದೆಯ ಬಿಗಿತ ಸರಿಯಾಗಿದ್ದರೆ ಮಾತ್ರ ಬಾಣ ಗುರಿ ಮುಟ್ಟುತ್ತದೆ. ಅದಕ್ಕಾಗಿ ಬಿಲ್ಲುಗಾರ ಬಿಲ್ಲಿನ ಹೆದೆಯನ್ನು ಆಕರ್ಣಾಂತ (ಕಿವಿಯವರೆಗೆ) ಎಳೆದು ಬಿಡುತ್ತಾನೆ. ಆಗ ಆ ಹೆದೆ ಮೊದಲಿದ್ದ ಸ್ಥಳಕ್ಕೆ ಹೋಗುವಾಗ **'ಝೇಂ'** ಎಂಬ ಧ್ವನಿ ಮಾಡುತ್ತದೆ. ಈ ಧ್ವನಿಯ ಸಹಾಯದಿಂದ ಬಿಲ್ಲುಗಾರ ಹೆದೆಯ ಬಿಗಿತ ಸರಿಯಾಗಿದೆಯೇ ಎಂದು ಪರೀಕ್ಷಿಸುತ್ತಾನೆ. ಈ ಕ್ರಿಯೆಗೆ **'ಜೇಗೆಯ್ಯು'**ವುದು ಎಂದು ಹೇಳಲಾಗುತ್ತದೆ.

## ಅಭ್ಯಾಸ ಪ್ರಶ್ನೋತ್ತರಗಳು

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಯಾರು?**
**ಉತ್ತರ:** ಜೈಮಿನಿ ಭಾರತ' ಕಾವ್ಯವನ್ನು ಬರೆದ ಕವಿ ಲಕ್ಷ್ಮೀಶ.

**2. ಯಜ್ಞಾಶ್ವವನ್ನು ಕಟ್ಟಿದವರು ಯಾರು?**
**ಉತ್ತರ:** ಯಜ್ಞಾಶ್ವವನ್ನು ಕಟ್ಟಿದವರು ಲವ.

**3. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?**
**ಉತ್ತರ:** ಕುದುರೆಯನ್ನು ಲವನು ಉತ್ತರೀಯದಿಂದ ಕಟ್ಟಿದನು

**4. ಮುನಿಸುತರು ಹೆದರಲು ಕಾರಣವೇನು?**
**ಉತ್ತರ:** ಲವನು ಯಜ್ಞದ ಕುದುರೆಯನ್ನು ಕಟ್ಟಿ ಹಾಕಿದ್ದರಿಂದ, ಅರಸರು ನಮ್ಮನ್ನು ಬಡಿವರು ಎಂದು ಮುನಿಸುತರು ಹೆದರಿದರು.

## ಹೆಚ್ಚುವರಿ ಪ್ರಶ್ನೋತ್ತರಗಳು

**5. ವಾಲ್ಮೀಕಿ ಋಷಿಗಳು ಎಲ್ಲಿಗೆ ಹೋಗಿದ್ದನು?**
**ಉತ್ತರ:** ವಾಲ್ಮೀಕಿ ಋಷಿಗಳು ವರುಣ ಲೋಕಕ್ಕೆ ಹೋಗಿದ್ದನು.

**6. ವಾಲ್ಮೀಕಿ ಮುನಿಗಳು ತೋಟದ ಕಾವಲಿಗೆ ಯಾರನ್ನು ನೇಮಿಸಿ ಹೋಗಿದ್ದರು?**
**ಉತ್ತರ:** ವಾಲ್ಮೀಕಿ ಮುನಿಗಳು ತೋಟದ ಕಾವಲಿಗೆ ಲವನನ್ನು ನೇಮಿಸಿ ಹೋಗಿದ್ದರು

**7. ಕೌಸಲ್ಯಕುಮಾರ ಯಾರು?**
**ಉತ್ತರ:** ಕೌಸಲ್ಯಕುಮಾರ ರಾಮ.

**8. ಕುದುರೆಯನ್ನು ಲವನು ಯಾವುದಕ್ಕೆ ಕಟ್ಟಿದನು?**
**ಉತ್ತರ:** ಕುದುರೆಯನ್ನು ಲವನು ಕದಳಿದ್ರುಮಕ್ಕೆ ಕಟ್ಟಿದನು.

**9. ಲವನ ತಾಯಿ ಹೆಸರೇನು?**
**ಉತ್ತರ:** ಲವನ ತಾಯಿ ಹೆಸರು ಜಾನಕಿ.(ಸೀತೆ)

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**

**ಉತ್ತರ:** ಭುಜಭಲವುಳ್ಳ ದೊರೆಗಳೆಲ್ಲರೂ ಶ್ರೀರಾಮನ ಆಜ್ಞೆಯನ್ನು ಕೇಳಿ, ಹೆದರಿ ಕುದುರೆಗೆ ನಮಸ್ಕರಿಸಿ ಬಿಟ್ಟು ಕಳುಹಿಸಲು, ಶ್ರೀರಾಮನ ಅಶ್ವಮೇಧ ಯಜ್ಞದ ಉತ್ತಮವಾದ ಕುದುರೆಯು ಭೂಮಿಯ ಮೇಲೆ ಸಂಚರಿಸುತ್ತ ವಾಲ್ಮೀಕಿಯ ವಾಸವಿದ್ದ ಉದ್ಯಾನವನದ ಹಸುರನ್ನು ಬಯಸಿ ಆಶ್ರಮವನ್ನು ಹೊಕ್ಕಿತು.

**2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

**ಉತ್ತರ:** ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯ ಪಡೆದ ಕುಮಾರ ಶ್ರೀರಾಮನೊಬ್ಬನೇ ವೀರನು, ಆತನ ಯಜ್ಞನದ ಕುದುರೆ ಇದು. ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಲಿ" ಎಂದು ಬರೆಯಲಾಗಿತ್ತು.

**3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

**ಉತ್ತರ:** ಲವನು ಉತ್ತರೀಯದಿಂದ ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿದಾಗ, ಅಲ್ಲಿದ್ದ ಮುನಿಗಳ ಮಕ್ಕಳೆಲ್ಲರು ಹೆದರಿ **"ಬೇಡ ಬೇಡ ರಾಜರ ಕುದುರೆಯನ್ನು ಬಿಡು ನಮ್ಮನ್ನು ಅವರು ಬಡಿಯುತ್ತಾರೆ."** ಎನ್ನುತ್ತಾರೆ. ಆಗ ಲವನು ನಗುತ್ತ **"ಬ್ರಾಹ್ಮಣರ ಮಕ್ಕಳು ಹೆದರಿದರೆ ಸೀತೆಯ ಮಗನು ಇದಕ್ಕೆ ಹೆದರುವನೆ, ಹೋಗಿ ನೀವು"** ಎಂದು ಶೌರ್ಯದಿಂದ ಬಿಲ್ಲಿನ ಹಗ್ಗವನ್ನು ಕಟ್ಟಿ, ಅದನ್ನು ಸವರಿ ಜೇಗೈದು ನಿಂತಿದ್ದನು.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**1. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?**

**ಉತ್ತರ:** ಭುಜಭಲವುಳ್ಳ ದೊರೆಗಳೆಲ್ಲರೂ ಶ್ರೀರಾಮನ ಆಜ್ಞೆಯನ್ನು ಕೇಳಿ, ಹೆದರಿ ಕುದುರೆಗೆ ನಮಸ್ಕರಿಸಿ ಬಿಟ್ಟು ಕಳುಹಿಸಲು, ಶ್ರೀರಾಮನ ಅಶ್ವಮೇಧ ಯಜ್ಞದ ಕುದುರೆಯು ಭೂಮಿಯ ಮೇಲೆ ಸಂಚರಿಸುತ್ತ ವಾಲ್ಮೀಕಿಯ ವಾಸವಿದ್ದ ಉದ್ಯಾನವನದ ಹಸುರನ್ನು ಬಯಸಿ ಆಶ್ರಮವನ್ನು ಹೊಕ್ಕಿತು. ಆಗ ಆ ತೋಟದ ರಕ್ಷಣೆಗೆ ಇದ್ದ ವೀರಲವನು ಕುದುರೆಯನ್ನು ಕಂಡನು. ಅದನ್ನು ನೋಡಿದ ಲವನು ಯಾವ ಕಡೆಯ ಕುದುರೆ ಇದು, ಹೂತೋಟವನ್ನು ಹೊಕ್ಕು ನುಗ್ಗು ನುರಿಯಾಗುವಂತೆ ತುಳಿಯುತ್ತಿದಿಯಲ್ಲ. ವಾಲ್ಮೀಕಿ ಋಷಿಗಳು ತೋಟವನ್ನು ಒಣಗದಂತೆ ಹಾರೈಕೆಮಾಡುವುದು ಎಂದು ನನಗೆ ನೇಮಿಸಿ ವರುಣದೇವನು ಕರೆಯಲಾಗಿ ಹೋದನು. ಮತ್ತೆ ವರುಣನ ಲೋಕದಿಂದ ಬಂದು ಇದನ್ನು ನೋಡಿ ಕೋಪಗೊಳ್ಳುತ್ತಾರೆಂದು, ಕುದುರೆಯ ಕಡೆಗೆ ಬಂದು ನೋಡಲು ಅದರ ಹಣೆಯ ಮೇಲೆ ಮೆರೆವ ಪಟ್ಟದ ಬರೆಹವನ್ನು ಓದಿಕೊಂಡು **"ಭೂಮಂಡಲದಲ್ಲಿ ಕೌಸಲ್ಯ ಪಡೆದ ಕುಮಾರ ಶ್ರೀರಾಮನೊಬ್ಬನೇ ವೀರನು, ಆತನ ಯಜ್ಞನದ ಕುದುರೆ ಇದು. ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಲಿ"** ಎಂದು ಇದ್ದ ಲೇಖನವನ್ನು ಓದಿ, ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದೆ ಇರುವರೇ, ತನಗೆ ಇರುವ ಈ ತೋಳುಗಳು ಏತಕ್ಕೆ ಬೇಕು ಎಂದು ಪ್ರತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದು ಉತ್ತರೀಯ (ಮೇಲುಹೊದಿಕೆ)ವನ್ನು ಉರಿಮಾಡಿಕೊಂಡು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದನು.

**2. ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ?**

**ಉತ್ತರ:** ಲವನ ನಡೆವಳಿಕೆ ಮೆಚ್ಚುಗೆಯಾಯಿತು. ಏಕೆಂದರೆ ಲವನಲ್ಲಿ ಜವಬ್ದಾರಿಯುತ ನಡೆವಳಿಕೆ, ಕ್ಷಾತ್ರಿಯ ಗುಣ, ಮಾತೃಪ್ರೇಮ, ವೀರತನ, ನಿರ್ಭಯ ಮತ್ತು ಮುಗ್ಧತೆ ಮುಂತಾದ ಗುಣಗಳೆಲ್ಲವು ಇವೆ. ಋಷಿಮುನಿಗಳು ಹೇಳಿದ ತೋಟದ ಕಾವಲನ್ನು ಕಾಯುವುದು, ತೋಟವು ಒಣಗಿದರೆ ಮುನಿಗಳ ಬೈಯುತ್ತಾರೆ ಎಂಬುದು ಆತನ ಜವಾಬ್ದಾರಿಯನ್ನು ಎತ್ತಿತೋರಿಸುತ್ತದೆ. **"ಹುಟ್ಟುಗುಣ ಗಟ್ಟಹತ್ತಿದರೂ ಹೋಗದು"** ಎಂಬುದು ನಾಣ್ಣುಡಿ. ಪ್ರತಿಯೊಂದು ಜೀವಿಯೂ ಹುಟ್ಟಿನಿಂದಲೇ ಕೆಲವೊಂದು ಗುಣಗಳನ್ನು ಪಡೆದಿರುತ್ತದೆ. ಇದಕ್ಕೆ ಅದರ ವಂಶವಾಹಿನಿ ಕಾರಣವಾಗಿರುತ್ತದೆ. ಕ್ಷತ್ರಿಯ ಕುಮಾರನಾದ ಲವ ಹುಟ್ಟಿದ್ದು ಋಷ್ಯಾಶ್ರಮದಲ್ಲಿ, ಬೆಳೆದದ್ದು ಋಷಿಕುಮಾರರ ಜೊತೆಗೆ. ಆದರೂ ಅವನ ದೇಹದಲ್ಲಿ ಹರಿಯುತ್ತಿರುವುದು ಕ್ಷತ್ರಿಯ ಗುಣವುಳ್ಳರಕ್ತ. ಹೀಗಾಗಿ ಆಶ್ರಮಕ್ಕೆ ಬಂದ ಕುದುರೆಯ ಹಣೆಯಲ್ಲಿದ್ದ ಲೇಖನದ ಒಕ್ಕಣೆ ಓದಿ ಕ್ಷತ್ರಿಯ ಸಹಜಗುಣ ಅವನಲ್ಲಿ ಉದ್ದೀಪನಗೊಂಡ ಸನ್ನಿವೇಶವನ್ನು ಕಾಣಬಹುದು.

ರಾಮನೊಬ್ಬನೇ ವೀರನು ಎಂಬ ವಾಕ್ಯವನ್ನು ಓದಿದ ಲವನಲ್ಲಿ ವೀರಗುಣ ಹೊರಹೊಮ್ಮುತ್ತದೆ. ಇವನ ಗರ್ವವನ್ನು ಬಿಡಿಸಬೇಕು ಇಲ್ಲದಿದ್ದರೆ ನನ್ನ ತಾಯಿಯನ್ನು ಬಂಜೆ ಎನ್ನದಿರುವರೇ ಎಂದು ತನ್ನ ತಾಯಿ ಇಂತಹ ವೀರನಿಗೆ ಜನ್ಮ ನೀಡಿದ್ದಾಳೆ ಎಂದು ವೀರಜನನಿ ಎಂಬ ಮಾತೃಪ್ರೇಮವನ್ನು ತೋರುತ್ತಾನೆ.

ಶ್ರೀರಾಮನು ಕೈಗೊಂಡ ಅಶ್ವಮೇಧದ ಕುದುರೆಯನ್ನು ಲವನು ಬಾಲಸಹಜ ಕುತೂಹಲದಿಂದ ಬಾಳೆಯಗಿಡಕ್ಕೆ ಕಟ್ಟುವುದು ಮುಗ್ದತೆಯನ್ನು ತೋರಿಸುತ್ತದೆ. ಜೊತೆಗೆ ರಾಮನಿಗಿಂತ ಮಿಗಿಲಾದ ಶಕ್ತಿ, ತೋಳ್ಬಲ ತನ್ನಲ್ಲಿಯೂ ಇದೆ ಎಂಬ ಶೌರ್ಯಗುಣ ಆತನಲ್ಲಿ ಹುದುಗಿದೆ. ಮುನಿಸುತರು ಹೆದರಿ ಕುದುರೆಯನ್ನು ಬಿಟ್ಟು ಬಿಡು ಎಂದಾಗ ನೀವು ಬ್ರಾಹ್ಮಣರ ಮಕ್ಕಳು ನಿಮಗೆ ಅಂಜಿಕೆ, ಆದರೆ ಇವನು ಜಾನಕಿಯ ಮಗ ಹೆದರುವನೇ ಎಂದು ಹೇಳುವಲ್ಲಿ ಅವನ ನಿರ್ಭಯವನ್ನು ತೋರಿಸುತ್ತದೆ. ಹೀಗೆ ಲವನಲ್ಲಿ ಜವಬ್ದಾರಿ, ಕ್ಷಾತ್ರಿಯ ಗುಣ, ಮಾತೃಪ್ರೇಮ, ವೀರತನ, ನಿರ್ಭಯ ಮತ್ತು ಮುಗ್ಧತೆಗಳೆಲ್ಲವು ಇರುವುದರಿಂದ ಆತನ ನಡೆವಳಿಕೆ ನನಗೆ ಮೆಚ್ಚುಗೆಯಾಯಿತು.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**1. "ರಘೂದ್ವಹನ ಸೊಲ್ಗೇಳಿ ನಮಿಸಲ್"**

**ಆಯ್ಕೆ :** ಈ ವಾಕ್ಯವನ್ನು **ಕವಿ ಲಕ್ಷ್ಮೀಶ** ವಿರಚಿತ **' ಜೈಮಿನಿ ಭಾರತ '** ಎಂಬ ಕೃತಿಯಿಂದ ಆಯ್ದ **'ವೀರಲವ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಶ್ರೀರಾಮನ ಅಶ್ವಮೇಧ ಯಾಗದ ಯಜ್ಞಾಶ್ವವು ಭೂಮಿಯಲ್ಲಿ ಸಂಚರಿಸುತ್ತಾ ವಾಲ್ಮೀಕಿ ಆಶ್ರಮವನ್ನು ಹೇಗೆ ಹೊಕ್ಕಿತು ಎಂದು ವರ್ಣಿಸುವಾಗ ಭುಜಭಲವುಳ್ಳ ದೊರೆಗಳೆಲ್ಲರೂ ಶ್ರೀರಾಮನ ಆಜ್ಞೆಯನ್ನು ಕೇಳಿ, ಹೆದರಿ ಕುದುರೆಗೆ ನಮಸ್ಕರಿಸಿ ಬಿಟ್ಟು ಕಳುಹಿಸಲು, ಶ್ರೀರಾಮನ ಅಶ್ವಮೇಧ ಯಜ್ಞಾಶ್ವವು ವಾಲ್ಮೀಕಿಯ ಆಶ್ರಮವನ್ನು ಹೊಕ್ಕಿತು ಎಂದು ಹೇಳಿದ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಶ್ರೀರಾಮನ ಹೆಸರನ್ನು ಕೇಳಿಯೇ ಆತನ ಯಜ್ಞಾಶ್ವಕ್ಕೆ ನಮಿಸಿದರು ಎಂಬುದು ಶ್ರೀರಾಮನ ಪರಾಕ್ರಮವನ್ನು ಮತ್ತು ಆತನಿಗೆ ತೋರುವ ಗೌರವವನ್ನು ಪರೋಕ್ಷವಾಗಿ ವರ್ಣಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

**2. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"**

**ಆಯ್ಕೆ:** ಈ ವಾಕ್ಯವನ್ನು **ಕವಿ ಲಕ್ಷ್ಮೀಶ** ವಿರಚಿತ **' ಜೈಮಿನಿ ಭಾರತ '** ಎಂಬ ಕೃತಿಯಿಂದ ಆಯ್ದ **'ವೀರಲವ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಲವನು ಆಶ್ರಮಕ್ಕೆ ಬಂದ ಯಜ್ಞ ಕುದುರೆಯ ಹಣೆಯ ಮೇಲೆ ಮೆರೆವ ಪಟ್ಟದ ಬರೆಹವನ್ನು ಓದಿ, ಶ್ರೀರಾಮನೊಬ್ಬನೇ ವೀರನೇನು ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದೆ ಇರುವರೇ ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:** ಲವನು ತನ್ನ ತಾಯಿ ವೀರಜನನಿ ಎಂಬ ಮಾತೃಪ್ರೇಮವನ್ನು ಮತ್ತು ತನ್ನ ವೀರತ್ವವನ್ನು ಪ್ರದರ್ಶಿಸುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**3. "ಅರಸುಗಳ ವಾಜಿಯಂ ಬಿಡು"**

**ಆಯ್ಕೆ :** ಈ ವಾಕ್ಯವನ್ನು **ಕವಿ ಲಕ್ಷ್ಮೀಶ** ವಿರಚಿತ **'ಜೈಮಿನಿ ಭಾರತ'** ಎಂಬ ಕೃತಿಯಿಂದ ಆಯ್ದ **'ವೀರಲವ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಮುನಿಸುತರು ಲವನಿಗೆ ಹೇಳಿದ್ದಾರೆ. ಲವನು ಉತ್ತರೀಯದಿಂದ ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿದಾಗ, ಅಲ್ಲಿದ್ದ ಮುನಿಗಳ ಮಕ್ಕಳೆಲ್ಲರು ಅಧಿಕವಾಗಿ ಹೆದರಿ ಬೇಡ ಬೇಡ ರಾಜರ ಕುದುರೆಯನ್ನು ಬಿಡು ನಮ್ಮನ್ನು ಅವರು ಬಡಿಯುತ್ತಾರೆ ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:** ರಾಜನ ಯಜ್ಞಾಶ್ವವನ್ನು ಕಟ್ಟಿಹಾಕುವುದು ಬೇಡ ಎಂದು ಹೇಳುವುದು ಮುನಿಸುತರು ರಾಜರುಗಳಿಗೆ ಭಯಗೊಳ್ಳುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**4. "ಜಾನಕಿಯ ಮಗನಿದಕೆ ಬೆದರುವನೆ"**

**ಆಯ್ಕೆ :** ಈ ವಾಕ್ಯವನ್ನು **ಕವಿ ಲಕ್ಷ್ಮೀಶ** ವಿರಚಿತ **'ಜೈಮಿನಿ ಭಾರತ'** ಎಂಬ ಕೃತಿಯಿಂದ ಆಯ್ದ **'ವೀರಲವ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಲವನು ಮುನಿಸುತರಿಗೆ ಹೇಳಿದನು. ಲವನು ಉತ್ತರೀಯದಿಂದ ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿದಾಗ, ಅಲ್ಲಿದ್ದ ಮುನಿಗಳ ಮಕ್ಕಳೆಲ್ಲರು ಅಧಿಕವಾಗಿ ಹೆದರಿ ಬೇಡ ಬೇಡ ರಾಜರ ಕುದುರೆಯನ್ನು ಬಿಡು ನಮ್ಮನ್ನು ಅವರು ಬಡಿಯುತ್ತಾರೆ ಎಂದು ಹೇಳಿದಾಗ ಲವನು ನೀವು ಬ್ರಾಹ್ಮಣರ ಮಕ್ಕಳು ಹೆದರಿದರೆ ಇವನು ಜಾನಕಿಯ ಮಗನು ಇದಕ್ಕೆ ಹೆದರುವನೆ, ಹೋಗಿ ನೀವು ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :** ಜಾನಕಿಯ ಮಗನಾದ ಈ ಲವನು ಯಾರಿಗೂ ಹೆದರುವುದಿಲ್ಲ ಎಂದು ಲವನು ತನ್ನ ನಿರ್ಭಯವನ್ನು ತೋರಿಸುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿದೆ.

### ಉ) ಹೊಂದಿಸಿ ಬರೆಯಿರಿ.

| | ಅ | ಬ | ಉತ್ತರಗಳು |
|---|---|---|---|
| 1 | ದೇವನೂರು | ರಾಮ | **ಲಕ್ಷ್ಮೀಶ** |
| 2 | ಕೌಸಲ್ಯೆ | ಲಕ್ಷ್ಮೀಶ | **ರಾಮ** |
| 3 | ವರುಣ | ಅಶ್ವ | **ಅಬ್ಧಿಪ** |
| 4 | ವಾಲ್ಮೀಕಿ | ಅಬ್ಧಿಪ | **ಮುನಿ** |
| 5 | ತುರಂಗ | ಮುನಿ | **ಅಶ್ವ** |
| | | ಮಳೆ | |
| | | ಶತ್ರುಘ್ನ | |

**ಭಾಷಾ ಚಟುವಟಿಕೆ**

**1. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರನ್ನು ತಿಳಿಸಿ.**

ಸೊಲ್ಗೇಳಿ, ನಲ್ಗುದುರೆ, ಬಿಲ್ಗೊಂಡು, ಬಿಲ್ದಿರುವನೇರಿಸಿ, ಪೂದೋಟ.

**ಸೊಲ್ಗೇಳಿ** – ಸೊಲ್ಲನ್ನು + ಕೇಳಿ = **ಕ್ರಿಯಾ ಸಮಾಸ**

**ನಲ್ಗುದುರೆ** – ನಲ್ಲಿತು + ಕುದುರೆ = **ಕರ್ಮಧಾರಯ ಸಮಾಸ**

**ಬಿಲ್ಗೊಂಡು** – ಬಿಲ್ಲನ್ನು + ಕೊಂಡು = **ಕ್ರಿಯಾ ಸಮಾಸ**

**ಬಿಲ್ದಿರುವನೇರಿಸಿ** – ಬಿಲ್ದಿರುವನ್ನು + ಏರಿಸಿ = **ಕ್ರಿಯಾ ಸಮಾಸ**

**ಪೂದೋಟ** – ಪೂವಿನ + ತೋಟ = **ತತ್ಪುರುಷ ಸಮಾಸ**

**2. ಕೊಟ್ಟಿರುವ ಪದಗಳಿಗೆ ತತ್ಸಮ– ತದ್ಭವಗಳನ್ನು ಬರೆಯಿರಿ.**

ವೀರ, ಯಜ್ಞ , ಬಂಜೆ

**ವೀರ** – ಬೀರ, **ಯಜ್ಞ** – ಜನ್ನ, **ಬಂಜೆ** – ವಂಧ್ಯಾ

**3. ವಿಂಗಡಿಸಿ ಸಂಧಿಯ ಹೆಸರು ಬರೆಯಿರಿ.**

ಚರಿಸುತದ್ವರದ, ನಿಜಾಶ್ರಮ, ಲೇಖನವನೋದಿ, ತೆಗೆದುತ್ತರೀಯಮಂ, ಬೇಡಬೇಡರಸುಗಳ, ನಿಂತಿರ್ದನು.

| | | | |
|---|---|---|---|
| **ಚರಿಸುತದ್ವರದ** | – ಚರಿಸುತ | + ಅದ್ವರದ | = **ಲೋಪಸಂಧಿ** |
| **ನಿಜಾಶ್ರಮ** | – ನಿಜ | + ಆಶ್ರಮ | = **ಸವರ್ಣದೀರ್ಘ ಸಂಧಿ** |
| **ಲೇಖನವನೋದಿ** | – ಲೇಖನವ | + ಓದಿ | = **ಲೋಪಸಂಧಿ** |
| **ತೆಗೆದುತ್ತರೀಯಮಂ** | – ತೆಗೆದು | + ಉತ್ತರೀಯಮಂ | = **ಲೋಪಸಂಧಿ** |
| **ಬೇಡಬೇಡರಸುಗಳ** | – ಬೇಡಬೇಡ | + ಅರಸುಗಳ | = **ಲೋಪಸಂಧಿ** |
| **ನಿಂತಿರ್ದನು** | – ನಿಂತು | + ಇರ್ದನು | = **ಲೋಪಸಂಧಿ** |

**4. ಕೊಟ್ಟಿರುವ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

**ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।**
**ನೊರ್ವನೇ ವೀರನಾತನ ಯಜ್ಞ ತುರಗಮಿದು ।**
**ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥**

| | | | | |
|---|---|---|---|---|
| 5 | 5 | 5 | 5 | = 20 |
| – ∪ – | – ∪∪ | ∪∪∪ ∪∪ | – – ∪ | |
| ಉರ್ವಿಯೊಳ್ | ಕೌಸಲ್ಯೆ | ಪಡೆದ ಕುವ | ರಂ ರಾಮ | |

| | | | | |
|---|---|---|---|---|
| 5 | 5 | 5 | 5 | = 20 |
| – ∪ – | – ∪ – | ∪∪ – ∪ | ∪∪∪ ∪∪ | |
| ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು | |

| | | | | | | | |
|---|---|---|---|---|---|---|---|
| 5 | 5 | 5 | 5 | 5 | 5 | 1 ಗುರು | = 30 + 1 ಗುರು |
| –∪∪∪ | – ∪ – | – ∪ – | ∪∪∪ – | – ∪ – | ∪∪∪ – | – | |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನ ವನೋ | ದಿ | |

**ಛಂದಸ್ಸು – ವಾರ್ಧಕ ಷಟ್ಪದಿ**

**ಲಕ್ಷಣ :** ಈ ಪದ್ಯದ ಒಂದು ಮತ್ತು ಎರಡನೆಯ ಪಾದದಲ್ಲಿ 5 ಮಾತ್ರೆಯ ತಲಾ 4 ಗಣಗಳು ಹಾಗೂ ಮೂರನೆಯ ಪಾದದಲ್ಲಿ 5 ಮಾತ್ರೆಯ 6 ಗಣಗಳು ಬಂದು ಮೇಲೊಂದು ಗುರು ಬಂದಿದ್ದು ವಾರ್ಧಕ ಷಟ್ಪದಿ ಪೂರ್ವಾರ್ಧದ ಲಕ್ಷಣವನ್ನು ಹೊಂದಿದೆ ಆದ್ದರಿಂದ ಇದು ವಾರ್ಧಕ ಷಟ್ಪದಿಯಾಗಿದೆ.

**ಭಾಷಾ ಚಟುವಟಿಕೆ**

**ಅ. ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ**

**ಉರ್ವಿಯೊಳ್** ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು **ಲವನುರಿದೆದ್ದನು** ॥

**ಅಥವಾ**

**ತೆಗೆದುತ್ತರೀಯಮಂ** ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು **ನಿಂತಿರ್ದನು** ॥